ಸಾಕ್ಷಿಯನ್ನು ದಿಃ 20-02-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ ಎಮ್ ಪಿ ಟಿ ವಕೀಲರಿಂದ (2 ನೇ ಎದುರುದಾರರ ಪರ)**

ಈ ಪ್ರಕರಣದಲ್ಲಿ ಹಾಜರಪಡಿಸಿದ ದಾಖಲೆಗಳ ಬಗ್ಗೆ ಮಾಹಿತಿ ಇದೆ. ಆ ದಿನ ನಾನು ನನ್ನ ಗಂಡ ಹಾಗೂ ನನ್ನ ಮೊಮ್ಮಗ ರಸ್ತೆ ನಿಯಮ ಪಾಲಿಸದೇ ಒಮ್ಮಿದೊಮ್ಮಲೇ ರಸ್ತೆ ದಾಟಲು ಹೋಗಿದ್ದರಿಂದ ನಮ್ಮ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನಮಗೆ ನಾಲ್ಕು ಗಾಲಿಯ ವಾಹನ ಅಪಘಾತಪಡಿಸಿದೆ ಎಂದರೆ ಸರಿಯಲ್ಲ. ಅದು ಬೈಕ ಆಗಿತ್ತು ಎಂದು ಹೇಳುತ್ತಾರೆ. ಮೋಟಾರ ಸೈಕಲ್ ಸವಾರನ ತಪ್ಪಿನಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತವಾದಗ ನನ್ನ ಗಂಡನಿಗೆ 50 ವರ್ಷ ವಯಸ್ಸಾಗಿತ್ತು. ನನ್ನ ಗಂಡನಿಗೆ ತಿಂಗಳಿಗೆ ರೂ.20 ಸಾವಿರ ಆದಾಯ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ವಯಸ್ಸು ಮತ್ತು ಆದಾಯದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. 2 ನೇ ಅರ್ಜಿದಾರಳು ನನ್ನ ಮಗಳು. ನನ್ನ ಗಂಡನ ಜೀವಂತ ಇದ್ದಾಗಲೇ 2 ನೇ ಅರ್ಜಿದಾರಳಿಗೆ ಮದುವೆಯಾಗಿದ್ದು ಅವಳಿಗೆ ಮಕ್ಕಳಾಗಿದ್ದು ಆಕೆ ತನ್ನ ಗಂಡನ ಮನೆಯಲ್ಲಿದ್ದಾಳೆ. ಮೋಟಾರ ಸೈಕಲ್ ಸವಾರನಿಗೆ ಚಾಲನಾ ಪರವಾಣಿಗೆ ಇರಲಿಲ್ಲ ಎಂದರೆ ಗೊತ್ತಿಲ್ಲ. ಹಾಗಾಗಿ ವಿಮಾ ಸಂಸ್ಥೆಯ ವಿಮಾ ಷರತ್ತು ಉಲ್ಲಂಘನೆಯಾಗಿದೆ ಎಂದರೆ ಸರಿಯಲ್ಲ. ಅಪಘಾತ ಮೃತನ ತಪ್ಪಿನಿಂದ ಆಗಿರುವುದರಿಂದ ಮತ್ತು ವಿಮಾ ಷರತ್ತು ಉಲ್ಲಂಘನೆಯಾಗಿರುವುದರಿಂದ ನಮಗೆ ಪರಿಹಾರ ನೀಡಲು ಎದುರುದಾರ ಸಂಸ್ಥೆಯವರು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(1 ನೇ ಎದುರುದಾರ ಗೈರು ಹಾಜರಿದ್ದು, ಯಾರು ಪ್ರತಿನಿಧಿಸದ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಿದೆ)

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸರಿ ಇದೆ.

C/C. ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.